ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಸ್ಥಳದಲ್ಲಿರುವ ಅಧಿಕಾರಿಗಳಿಂದ ಸರ್ಕಾರದವರು ಮಾಹಿತಿಯನ್ನು ಪಡೆದುಕೊಂಡು ಯಾರು ವಾರಾಚ ಮಾಡಿವ್ದಾರೆ ಅಂಥ ಜಮೀನನ್ನು ಸರ್ಕಾರಕ್ಕೆ ವಶ ಪಡಿಸಿಕೊಳ್ಳುವುದಕ್ಕೆ ಅಡ್ಡಿ ಆತಂಕ ಏನಿದೆ ಸ್ವಾಮಿ ?

ಶ್ರೀ ಎಚ್. ವಿ. ಕೌಜಲಗಿ.—ಕೆಲವು ವಿಷಯಗಳು ಸರ್ಕಾರದ ಗಮನಕ್ಕೆ ಬಂದಿವೆ. ನಾವೂ ಕೂಡ ಚರ್ಚಿಸಿ ನಡೆಸಿದ್ದೇವೆ. ಸಾವಿರಾರು ಎಕರೆ ಸಾವಿರಾರು ಜನರಿಗೆ ಕೊಟ್ಟಿರುವುದರಿಂದ ಅವುಗಳನ್ನೆಲ್ಲ ಸರಿಯಾಗಿ ವಿಚಾರ ಮಾಡುವುದು ಕಷ್ಟವಾಗುತ್ತದೆ.

ಶ್ರೀ ಇ. ನಾರಾಯಣ ಗೌಡ.—ಸಾಧಾರಣವಾಗಿ 50–60 ಜನ ರೈತರಿಗೆ ಹಂಚಿರುವ ಭೂಮಿಗೆ ಸಾಗುವಳಿ ಚೀಟಿಯನ್ನು ಕೊಡತಕ್ಕ ಸಮಯದಲ್ಲಿ ಸರ್ಕಾರದವರು ಸ್ಪೇ ಮಾಡಿರುವುದು ನಿಜವೇ ? ಹಾಗಿದ್ದರೆ ಸ್ಪೇ ತೆಗೆದು ರೈತರಿಗೆ ಸಾಗುವಳಿ ಚೀಟಿಕೊಡುವ ವ್ಯವಸ್ಥೆ ಮಾಡರಾಗುತ್ತದೆಯೇ ?

ಶ್ರೀ ಎಚ್. ವಿ. ಕೌಜಲಗಿ.—1967ನೇ ಇಸವಿ ನಂತರ ಕೆಲವು ಭೂಮಿ ಕೊಟ್ಟಿದ್ದು ಅವರಿಗೆ ಸಾಗುವಳಿ ಚೀಟಿ ಕೊಟ್ಟಿದ್ದಿಲ್ಲ. ಅವರಿಗೆ ಕೊಟ್ಟಿರುವುದು ಸರಿಯಾಗಿಲ್ಲ ಎನ್ನುವ ದೂರುಗಳು ಬಂದಾಗ, ಅವುಗಳನ್ನು ವಿಚಾರ ಮಾಡಿದಾಗ ಕೆಲವೊಂದು ದೂರುಗಳು ನಿಜವಿದ್ದು, ಕಾಯಿದೆಯ ಪ್ರಕಾರ ಆ ರೀತಿ ಕೊಟ್ಟಿದ್ದುದನ್ನು ರದ್ದು ಮಾಡಿದ್ದರಿಂದ ಸಾಗುವಳಿ ಚೀಟಿಯನ್ನುಕೊಡಲಿಲ್ಲ. ಹೊಸದಾಗಿ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಮಾಡಿರುವ ಪ್ರಕಾರ ಅದನ್ನು ಹಂಚಬೇಕಾಗುತ್ತದೆ.

ಶ್ರೀ ಇ. ನಾರಾಯಣ ಗೌಡ.—ಕಾಯಿದೆಗೆ ವಿರೋಧವಾಗಿ ಕೊಟ್ಟಿದ್ದಾರೆ ಎಂದು ಹೇಳಿದರು. ಯಾವ ರೀತಿಯಿಂದ ಕಾಯಿದೆಗೆ ವಿರೋಧವಾಗಿ ಮಾಡಿದರು ಎಂದು ತಿಳಿಸುತ್ತಾರೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಹೈ ಕೋರ್ಟಿನ ಕೆಲವು ತೀರ್ಮಾನಗಳ ಪ್ರಕಾರ ಮುಂತ್ರಿಗಳಿಗೆ ಕೊಡಲಿಕ್ಕೆ ಅಧಿಕಾರವಿಲ್ಲ, ರಿಕಾರ್ಡ್ ಬಿಲ್ಟ್ ಅಪ್ ಮಾಡದೆ ಕೊಟ್ಟಿದ್ದರು, ಹೀಗೆ ಅನೇಕ ದೋಷಗಳಿದ್ದುವು.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಯಾವುದಾದರೂ ದೊಡ್ಡ ಕಾರ್ಖಾನೆ ಇದ್ದರೆ ಅದರ ಸುತ್ತ ಮುತ್ತ ಐದು ಮೈಲಿ ಪ್ರದೇಶದಲ್ಲಿ ಬಹಳ ಬೆಲೆ ಬರುತ್ತದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ? ಹಾಗಿದ್ದರೂ ಆ ಸಮಯದಲ್ಲಿ ಸರ್ಕಾರದವರು ನೇರವಾಗಿ ಜಮೀನನ್ನು ಹಂಚಿರುವುದರಲ್ಲಿ ಇರುವ ಒಳ ಉದ್ದೇಶವೇನು ಎನ್ನುವುದನ್ನು ತಿಳಿಸುತ್ತಾರೆಯೇ ?

ಶ್ರೀ ಎಚ್. ವಿ. ಕೌಜಲಗಿ.—1968ನೇ ಇಸವಿಗೆ ಪೂರ್ವದಲ್ಲಿ ಅಪ್ಲಿಕೇಶನ್ ರೂಲ್ಸ್ ಇದ್ದಿಲ್ಲ. 1968ರ ನಂತರ ಕಾರ್ಖಾನೆಗಳಿಗೆ ಮತ್ತು ನಗರಗಳಿಗೆ ಎರಡು ಮೂರು ಮೈಲಿ ಪ್ರದೇಶದಲ್ಲಿರುವ ಭೂಮಿಯನ್ನು ಕೊಡಬಾರದು ಎನ್ನುವ ಕೆಲವು ನಿಯಮಗಳನ್ನು ಮಾಡಲಾಗಿದೆ. ಹೊಸ ನಿಯಮಗಳು ಬರುವ ಮೊದಲೇ ಕೊಟ್ಟಿರುವುದರಿಂದ ಹೀಗಾಗಿರಬಹುದು.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಹಿಂದೆ ಸರ್ಕಾರದವರು ಮಾಡಿರುವ ತಪ್ಪಿಗೆ ಈಗ ಮಂತ್ರಿಗಳು ಕ್ಷಮೆ ತೋರಿಸಿ ಉತ್ತರ ಕೊಡುತ್ತಿರುವುದಕ್ಕೆ ಇದರ ಒಳ ಉದ್ದೇಶವೇನು ?

Mr. DEPUTY SPEAKER.—That question does not arise.

9–00 A.M.

Night Service buses between Bangalore and Mangalore

575. Sri B. M. IDINABBA (Mangalore).—

Will the Minister for Transport be pleased to state :—

(*a*) whether there are night service Government Luxury buses plying from Mangalore–Bangalore ; Bangalore–Mangalore ;

(*b*) the number of buses that are plying and their timings ;

(SRI B. M. IDINABBA)

(*c*) whether there are such private night service buses besides Government buses plying from Mangalore to Bangalore and Bangalore to Mangalore;

(*d*) the number of such private buses and their timings;

(*e*) whether it is a fact that the Government buses will not be full as private buses have been permitted even after nationalisation of Mangalore Division;

(*f*) whether the Government have any proposals to reduce such loss to Government buses and to improve their conditions;

SRI MOHAMED ALI (Minister for Transport).—

(*a*) The Mysore State Road Transport Corporation is operating night luxury services on these two routes.

(*b*) One bus leaving Bangalore at 9 p. m. and reaching Mangalore at 6 a.m. and one bus leaving Mangalore at 9 p. m. and reaching Bangalore at 6 a. m.

(*c*) Buses covered by contract carriage permits are plying from Bangalore to Mangalore and from Mangalore to Bangalore.

(*d*) The number and timings of these contract carriages are not fixed.

(*e*) In view of the clandestine operation of contract carriages the revenue of the Mysore State Road Transport Corporation has been affected.

(*f*) Government are alive to this problem. The Police authorities and the authorities of Motor Vehicles Department and the Mysore State Road Transport Corporation are making their best efforts to put an end to this clandestine operation. In fact the Executive Staff of the Motor Vehicles Department and the Flying squads of the Mysore State Road Transport Corporation have carried out intensive checks. As a result, 24 permits have been suspended and 25 permits have been cancelled and Rs. 34,767 collected as penalty in respect of 314 check reports by the Regional Transport Authorities. Action in respect of the remaining reports is being expedited and checking continues unabated. The Mysore Motor Vehicles Rules have been amended to enable the permit issuing authority to refuse to grant or to renew the contract carriage permits whenever there are more than 3 entries in the History Sheet of the applicant relating to offences committed by him. For exercising a better control over the issue of permits, it is proposed to vest the power of grant of contract carriage permits on inter-regional routes in the State Transport Authority.

Further amendments to Rules and Acts are also under active consideration of Government.

ಶ್ರೀ ಬಿ. ಎಂ. ಇದಿನಬ್ಬ.—ಬೆಂಗಳೂರಿನಿಂದ ಮಂಗಳೂರಿಗೆ ಓಡತಕ್ಕ ಖಾಸಗೀ ಸುಖಾಸೀನ ಬಸ್ಸುಗಳು ಎಷ್ಟಿವೆ, ಮತ್ತು ಅವು ಯಾವ್ಯಾವ ಸಮಯದಲ್ಲಿ ಓಡುತ್ತಿವೆ ಎಂದರೆ ಅದಕ್ಕೆ ಉತ್ತರವಾಗಿ "ಕಂಟ್ರಾಕ್ಟ್" ಆಧಾರದಮೇರೆ ಓಡತಕ್ಕ ಬಸ್ಸುಗಳ ಸಂಖ್ಯೆ ಗೊತ್ತಿಲ್ಲ ಎಂದು ಹೇಳಿದೆ. ಹಾಗಾದರೆ ಅಲ್ಲಿ ಸಂಖ್ಯೆ ಗಟ್ಟಿರೆ ಬಸ್ಸುಗಳು ಓಡುತ್ತಿರುವುದು ಸರ್ಕಾರದ ಗಮನಕ್ಕೆ ಏಕೆ ಬರಲಿಲ್ಲ! ಈ ನಗ್ನ ಸತ್ಯ ಸರ್ಕಾರಕ್ಕೆ ಗೊತ್ತಿಲ್ಲವೆಂದರೆ ನಂಬಬಹುದೆ?

Sri MOHAMED ALI.—In view of the Supreme Court decision that contract carriage implies that they will be plying for carrying passengers from one point to another without picking up or dropping passengers *en route*, Stage carriage permits and contract carriage permits are granted for different kinds of routes and there is no inconsistency in both kinds of permits as the permits cater to different routes. Therefore a situation has arisen now for the Government to take action and amend the law suitably so that the scheme of nationalisation is not defeated by clandestine operations.

ಶ್ರೀ ಬಿ. ಎಂ. ಇದಿನಬ್ಬ.—ಮಂಗಳೂರಿನಿಂದ ಬೆಂಗಳೂರಿಗೂ ಮತ್ತು ಬೆಂಗಳೂರಿಂದ ಮಂಗಳೂರಿಗೆ ಓಡತಕ್ಕ ಖಾಸಗೀ ಬಸ್ಸುಗಳಲ್ಲಿ ಒಳ್ಳೆಯ ಸೀಟುಗಳೂ, ರೇಡಿಯೋ ಮತ್ತು ಒಳ್ಳೆಯ ಕಂಡಕ್ಟರ್ ಇತ್ಯಾದಿಗಳನ್ನು ಇಟ್ಟಿರುವುದರಿಂದಲ್ಲವೇ ಅವರಿಗೆ ಪ್ರಯಾಣಿಕರು ಸಿಕ್ಕಿ ಸರ್ಕಾರಿ ಬಸ್ ಖಾಲಿ ಹೋಗುವುಕ್ಕೆ ಕಾರಣವಾಗಿದೆಯಲ್ಲವೇ?

Sri MOHAMED ALI.—It is not correct that M.S.R.T.C. buses are running empty. They are also carrying passengers in their buses. They are also introducing new luxury buses.

ಶ್ರೀ ಬಿ. ದೊಡ್ಡಬೋರೇಗೌಡ.— (ಉ) ಉತ್ತರವಾಗಿ ಇದರಲ್ಲಿ ಸರ್ಕಾರಿ ಅಧಿಕಾರಿಗಳ ಕೈವಾಡವಿದೆ, ಅವರೇ ಈ ಖಾಸಗೀ ಜನರಿಗೆ ಉತ್ತೇಜನ ಕೊಡುತ್ತಿದ್ದಾರೆಂದು ಹೇಳಲಾಗಿದೆ. ಅಂದಾಗ ಇಲ್ಲಿಯವರೆಗೆ ಎಷ್ಟು ಜನರ ಬಗ್ಗೆ ಕ್ರಮ ಕೈಕೊಳ್ಳಲಾಗಿದೆ?

Sri MOHAMED ALI.—I have not said that there is connivance by Government officials, but what I have said in my statement is that intensive checking is going on and more than 1000 cases have been detected. Even after sending this reply about 300 cases have been detected and they are under consideration by various R.T.A.s and they will take disciplinary action against the concerned officials.

Sri KONDAJJI BASAPPA.—Who issues permits for these Stage carriage contracts?

Sri MOHAMED ALI.—R.T.A.s who are quasijudicial authorities grant permits. The total number of permits granted by them is 192. Out of that 25 have been cancelled; 24 are suspended; regarding others who have violated the conditions of the permit, action is pending. Here I must state that all the 192 permits are not clandestine operators some are genuine tourist operators.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಸರ್ಕಾರದವರು ಓಡಿಸುತ್ತಿರುವ ಬಸ್ಸುಗಳಲ್ಲೂ ಒಳ್ಳೆಯ ಆಸನ ರೆಡಿಯೋ ಮತ್ತು ಸಣ್ಣ ಸಣ್ಣ ಹೆಣ್ಣುಮಕ್ಕಳನ್ನು ಕಂಡಕ್ಟರುಗಳನ್ನಾಗಿ ನೇಮಕ ಮಾಡಬೇಕೆಂದು ಆಲೋಚಿಸಲಾಗುತ್ತಿದೆ ಎಂಬುದು ನಿಜವೇ?

Sri MOHAMED ALI.—So far as M.S.R.T C. is concerned, I understand that it is going to introduce about 24 new luxury buses shortly within one or two months. So far as the question of appointing lady conductors is concerned, it has not been considered and decided at all.

ಶ್ರೀ ಎನ್. ಹುಚ್ಚಮಾಸ್ತಿಗೌಡ.—(ಈ) ಗೆ ಉತ್ತರವಾಗಿ ಕೊಟ್ಟಿರತಕ್ಕ ಭಾಗದಲ್ಲಿ ಎಷ್ಟು ಖಾಸಗೀ ಬಸ್ಸುಗಳು ಓಡುತ್ತಿವೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ ಎಂದು ಹೇಳಲಾಗಿದೆ. ಇಷ್ಟು ಜನಜನಿತವಾಗಿರತಕ್ಕ ವಿಚಾರ ಸರ್ಕಾರದವರ ಗಮನಕ್ಕೆ ಬರಲಿಲ್ಲವೇ? ಅಲ್ಲಿ ಎಷ್ಟು ಬಸ್ಸುಗಳನ್ನು ಓಡಿಸಲಾಗುತ್ತಿದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲವೇ?

Sri MOHAMED ALI.—It has come to the notice of Government that some of them are operating as regular services, but so far as contract carriage permits are concerned, no timing is fixed by the R.T.As. and they run as and when they get passengers.

Sri S. SIVAPPA.—There is competition among the R.T.As. to issue more permits for contract carriages. What is the attraction for these R.T.As. to issue more permits?

Sri MOHAMED ALI.—So far as R.T.A. is concerned, it consists of 4 members, the Deputy Commissioner as the Chairman, one non-official, the executive Engineer and the S.P. They are expected to assess the requirements and grant permits. They have not assessed the requirements. I must say on this occasion that some time back, last year, I think Sri Hutchmasthy Gowda put a question and I was able to know as a result of that question that 55 permits were granted by the Bangalore R.T.A. on one fine morning and the same R.T.A. issued 10 permits to one party. Similar indiscriminate permits have been granted by the R.T.A., Bijapur. So far as the other R.T.As. are concerned, I do not think that they have granted permits indiscriminately. However, in order to adopt a uniform policy taking into consideration the Statewide requirements, a proposal is there before the Government to vest the S.T.A. with the power of granting Stage carriage permits.

Smt. WINNIFRED F. FERNANDES.—Is it not a fact that some of the routes in South Kanara District are not nationalised and is it not a fact that the facility rendered to the public by the private night services where routes are not nationalised is good?

Sri MOHAMED ALI.—Here the question is about nationalised routes only. So far as non-nationalised routes are concerned, if contract carriage permit holders operate their services, nobody will have any objection; nor is it in violation of law.

ಶ್ರೀ ಕೆ. ನಂಗನಗೌಡ.—ಈಗತಾನೇ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ವಿಜಾಪುರದಲ್ಲಿ ಒಂದೇ ದಿನದಲ್ಲಿ ಅಲ್ಲಿ ಅಧಿಕಾರಿಗಳು 100 ಲೈಸೆನ್ಸ್‌ಗಳನ್ನು ಕೊಟ್ಟಿದ್ದಾರೆಂದೂ ಮತ್ತು ಒಬ್ಬರಿಗೇ 10 ಲೈಸೆನ್ಸ್‌ಗಳನ್ನು ಕೊಡಲಾಗಿದೆಯೆಂದು ಹೇಳಿದರು. ಹಾಗಿರುವಾಗ ನಮ್ಮ ರಾಯಚೂರು ಜಿಲ್ಲೆಗೆ ಒಂದೂ ಲೈಸೆನ್ಸ್‌ನ್ನು ಕೊಟ್ಟಿಲ್ಲ ಏಕೆ? ಮತ್ತು ಸರ್ಕಾರಿ ಬಸ್ಸುಗಳಿಗೆ ಜನರು ಬಾರದಿರುವುದು ಅವರು ಪ್ರಯಾಣದ ದರವನ್ನು ಹೆಚ್ಚು ಇಟ್ಟಿರುವುದರಿಂದ ಅಂದರೆ ಈಗ ಉದಾಹರಣೆಗೆ ಹೇಳುವುದಾದರೆ ಬೆಂಗಳೂರಿನಿಂದ ಬಳ್ಳಾರಿಗೆ ಸರ್ಕಾರಿ ಬಸ್ಸಿನಲ್ಲಿ 15 ರೂಪಾಯಿಗಳ ದರ ಇಟ್ಟಿದ್ದರೆ ಖಾಸಗಿ ಬಸ್ಸಿನಲ್ಲಿ 10 ರೂಪಾಯಿಗಳನ್ನು ಮಾತ್ರ ತೆಗೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಅಲ್ಲಿ ದರವನ್ನು ಕಡಿಮೆ ಮಾಡಿರುವುದೇ ಹೆಚ್ಚು ಜನರು ಪ್ರಯಾಣ ಮಾಡುವುದಕ್ಕೆ ಕಾರಣವೆಂದರೆ ಜಪ್ಪುತ್ತೀರಾ?

Sri MOHAMED ALI.—It is not the Government which grant the permits. The hon. Member should know that the authority to grant permits is a quasi-judicial authority, which we do not question. But here

I would like to inform the hon. Member that this disease is also spreading in Raichur District. Out of 103, I think, the R.T.A. is allowing overlapping of nationalised routes in 51 routes.

Sri H. SIDDAVEERAPPA.—Since most of the members of the R.T.A. are Government Officers, perhaps excepting one non-official, and although they are quasi-judicial bodies, would it be possible for the Government to have a sort of leading influence because Govenment is one of the operators to see that the interests of the Road Transport Corporation do not conflict with the permits they issue and that as early as possible the Act is suitably amended to curtail their powers?

Sri MOHAMED ALI.—Last week, I had a meeting with the Hon. Law Minister, Law Secretary, Home Secretary and other officials. We have finalised the proposals. Possibly I may receive the file from the Law Department today and I will be able to inform the House on Monday what action we propose to take.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸ್ವಾಮಿ, ಕಂಟ್ರಾಕ್ಟ್ ಕ್ಯಾರೇಜಸ್‌ನ್ನು ನಡೆಸಬೇಕಾದರೆ ಕೆಲವು ಕಂಡೀಷನ್ಸ್ ಇವೆ. ಆ ಕಂಡೀಷನ್ನಿನಂತೆ ಅವರು ಮೊದಲು ಪ್ಯಾಸೆಂಜರ್ಸ್ ಲಿಸ್ಟ್ ಕೊಡಬೇಕು. ಆದರೂ ಈ ಲಿಸ್ಟ್‌ನ್ನು ಕೊಡದೆ ದಿನವಹಿ ತಮ್ಮ ಅಧಿಕಾರಿಗಳ ಸಹಾಯದಿಂದ ಅವರಿಗೆ ಸಾಕಾದಷ್ಟು ಲಂಚವನ್ನು ಕೊಟ್ಟು ಬಸ್ಸುಗಳನ್ನು ಓಡಿಸುತ್ತಿದ್ದಾರೆ. ಆದುದರಿಂದ ಇದನ್ನು ನಿಲ್ಲಿಸುವುದಕ್ಕೆ ಸರ್ಕಾರಕ್ಕೆ ಶಕ್ತಿ ಇದೆಯೇ?

Sri MOHAMED ALI.—Government has all the powers but Government has to exericise the powers within the frame work of the law. The S.T.A. lay down conditions, as suggested by the hon. Members; but it has been stayed by the appellate authority. Therefore, Government is contemplating to lay down rules; that will mean subordinate legislation; then no appellate authority will be able to give stay.

ಶ್ರೀ ಎಚ್. ಬಿ. ಜ್ಯಾಲನಯ್ಯ.—ತಾವು ಲಕ್ಸುರಿ ಸರ್ವಿಸ್ ಬಸ್‌ಗೆ ಹೆಚ್ಚು ಗಮನ ಕೊಡುತ್ತಾ ಇದ್ದೀರಿ. ಇದರಿಂದ ಇಂಟೀರಿಯರ್‌ನಲ್ಲಿ ಬಸ್ ಓಡಾಡುವ ಬಸ್ಸುಗಳಿಗೆ ಹೆಚ್ಚು ಗಮನ ಕೊಡುತ್ತಾ ಇಲ್ಲ. ಆದುದರಿಂದ ಈ ಬಸ್ಸುಗಳು ಸಕಾಲದಲ್ಲಿ ಚ್ಯೆಮಿಗೆ ಸರಿಯಾಗಿ ತಲುಪದೇ ಇರುವುದರಿಂದ ಹೆಚ್ಚು ಹೆಚ್ಚು ಜನ ಪ್ರೈವೇಟ್ ಕಾಂಟ್ರಾಕ್ಟ್ ಬಸ್‌ಗೆ ಗಮನ ಕೊಟ್ಟಿರುವುದು ಸರಿಯೇ?

Sri MOHAMED ALI.—This is a good suggestion. These contract buses are being operated only during nights. Therefore taking into consideration all these aspects, the Road Transport Corporation has decided to operate night services to all the District Headquarters.

ಶ್ರೀ ಕೆ. ಪಿ. ನಾಡಗೌಡ.—ಸ್ವಾಮಿ, ಎಂ.ಎಸ್.ಆರ್.ಟಿ.ಸಿ.ಯವರು ನೈಟ್ ಲಕ್ಸುರಿ ಬಸ್ ಸರ್ವಿಸ್‌ನ್ನು ಓಡಿಸುತ್ತಾರೆ. ಕಾಂಟ್ರಾಕ್ಟ್‌ನ ಪೀಲೂ ಪ್ರೈವೇಟ್ ಬಸ್‌ನ್ನು ಓಡಿಸುತ್ತಾರೆ. ಆದರೆ ಸರ್ಕಾರಿ ಬಸ್ಸುಗಳು ಖಾಲಿಯಾಗಿ ಓಡಾಡುತ್ತಾ ಇವೆ. ಆ ಬಸ್‌ನಲ್ಲಿ ಎಂ.ಎಲ್.ಎ. ಮಾತ್ರ ಬರುತ್ತಾರೆ. ಹೀಗೆ ಖಾಲಿಯಾಗಿ ಓಡಾಡುವುದಕ್ಕೆ ಕಾರಣ ಹುಬ್ಬಳ್ಳಿಯಿಂದ ಬೆಂಗಳೂರಿಗೆ ಮತ್ತು ಬೆಂಗಳೂರಿನಿಂದ ಹುಬ್ಬಳ್ಳಿಗೆ ಪ್ರೈವೇಟ್ ಬಸ್‌ನಲ್ಲಿ 15 ರೂಪಾಯಿ ಚಾರ್ಜು, ಸರ್ಕಾರಿ ಬಸ್‌ನಲ್ಲಿ 19 ರೂಪಾಯಿ ಚಾರ್ಜು ತೆಗೆದುಕೊಳ್ಳುತ್ತಾರೆ. ಈ ರೀತಿ ಪ್ರೈವೇಟ್ ಬಸ್‌ನಲ್ಲಿ ಚಾರ್ಜು ಕಡಿಮೆ ಇರುವುದರಿಂದ ಸರ್ಕಾರಿ ಬಸ್‌ನಲ್ಲಿ ಯಾರೂ ಬರುವುದಿಲ್ಲ. ಇದರಿಂದ ಎಂ.ಎಸ್.ಆರ್.ಟಿ.ಸಿ. ಯವರಿಗೆ ಬಹಳ ನಷ್ಟವಾಗುವುದಿಲ್ಲವೇ?

Sri MOHAMED ALI.—I do not think there is such heavy loss. But to a little extent they have affected our night services.

ಶ್ರೀ ಬಿ. ಎಂ. ಇದಿನಬ್ಬ.—ಈಗ ಬಸ್ ರಾಷ್ಟ್ರೀಕರಣವಾದ ಮೇಲೆ ಬೆಂಗಳೂರಿನಿಂದ ಮಂಗಳೂರಿಗೆ, ಮಂಗಳೂರಿನಿಂದ ಬೆಂಗಳೂರಿಗೆ ರಾತ್ರಿ ವೇಳೆ ಓಡಾಡುವ ಬಸ್ಸು ಒಂದೇ ಒಂದು ಇಟ್ಟಿದ್ದೀರಿ. ಇಲ್ಲಿ ಬೇಕಾದಷ್ಟು ಪ್ರೈವೇಟ್ ಕಾಂಟ್ರಾಕ್ಟ್ ಬಸ್ಸುಗಳು ರಾತ್ರಿ ವೇಳೆ ಓಡಿಸಿ, ಯಶಸ್ವಿಯಾಗಿದ್ದಾರೆ. ಹೀಗಿರುವಾಗ ತಾವು ಮಾಡಿಕೊಂಡಿರುವ ರಾಷ್ಟ್ರೀಕರಣ ಯಶಸ್ವಿಯಾಗಿಲ್ಲ, ಅಪ ಯಶಸ್ವಿ ಆದಹಾಗೆ ಆಗಿದೆ. ಆದುದರಿಂದ ಈಗ ನೀವು ಮಾಡಿಕೊಂಡಿರುವ ರಾಷ್ಟ್ರೀಕರಣವನ್ನು ನಿಲ್ಲಿಸುವುದಕ್ಕೆ ಆಲೋಚನೆ ಮಾಡುತ್ತೀರಾ ?

Sri MOHAMED ALI.—There is no question of going back. Nationalisation has been a success. It has been nationalised in the interest of the average traveller. As already stated, action is being contemplated so far as South Kanara District is concerned. It is a problem District for transport. If contract carriage is not there, they will run private cars as taxis.

Storage of Foodgrains in Coorg District

589. Sri N. LOKAYYA NAIK (Virajpet) .—

Will the Minister of State for Food and Civil Supplies be pleased to state :—

(*a*) the amount of expenditure incurred towards the godown for storage of food articles in Ponnampet of Virajpet Taluka;

(*b*) the quantity of various kinds of foodgrains stored during 1968 and 1969;

(*c*) the places from where the food articles were brought to this place during the said period and the expenditure incurred towards lorry charges, etc. ;

(*d*) the quantity of food articles distributed in Coorg District during the said period;

(*e*) the quantity of articles sold through tenders and the accepted rate per quintal and together with the number of purchasers ;

(*f*) the shortage, if any, that occurred during the above period; the total extent of loss due to difference if any between the purchase and sale prices ?

Sri B. VITHALDAS SHETTY (Minister of State for Food and Civil Supplies) :—

(*a*) The total expenditure incurred in respect of godown at Ponnampet is Rs. 6,40,425-64.

(*b*) The foodgrains stored, the period of storage and their total quantity in 1968 and 1969 is as follows :

	Q.	*Kgs.*
(i) Milo supplied from 10th April 1968.	8,874	73